# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸೌಮ್ಯಕ್ಕೆ ಒಳಪಟ್ಟಿದೆ)

ಪ.ಸಂ:ಜೆಸ್ಕಾಂ/ಕಾನಿಅ/ಲೆಅ/ಸಲೆಅ/ಸಿಂಧ/2023-24/ 3694-3700
ಇಮೇಲ್ ಐಡಿ:
eesindhanur.gescom@yahoo.com
ಮೊಬೈಲ್ ನಂ:

ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ವಿಭಾಗ
ಜೆಸ್ಕಾಂ ಸಿಂಧನೂರು ರವರ ಕಚೇರಿ.

ದಿನಾಂಕ: - 5 OCT 2023

ಲಗತ್ತು:

SEE Coml - Mp 7/10/23

## ಹೆಚ್.ಟಿ ಗ್ರಾಹಕರ ಸಂವಾದ ಸಭೆ ನಡವಾಳಿಗಳು

ದಿನಾಂಕ 04.10.2023 ರಂದು ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಜೆಸ್ಕಾಂ, ಸಿಂಧನೂರು ರವರ ಅಧ್ಯಕ್ಷತೆಯಲ್ಲಿ ಲಿಂಗಸ್ಗೂರು, ಮಸ್ಕಿ ಹಾಗೂ ಸಿಂಧನೂರು ತಾಲೂಕಗಳ ಹೆಚ್.ಟಿ ಗ್ರಾಹಕರ ಸಂವಾದ ಸಭೆಯನ್ನು ಕಾರ್ಯ ಮತ್ತು ಪಾಲನೆ ವಿಭಾಗೀಯ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು. ಸದರಿ ಸಭೆಗೆ ಜೆಸ್ಕಾಂ ಅಧಿಕಾರಿಗಳು ಹಾಗೂ ಹೆಚ್.ಟಿ ಗ್ರಾಹಕರ ಉಪಸ್ಥಿತರಿದ್ದರು

ಅಧಿಕಾರಿ ಮತ್ತು ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಅಧಿಕಾರಿಗಳು | ಹುದ್ದೆ | ಸ್ಥಳ |
|---|---|---|---|
| 1 | ಶ್ರೀ. ವಿಷ್ಣು.ಜಿ, | ಕಾನಿಅ(ವಿ) | ಕಾ&ಪಾ ವಿಭಾಗ, ಜೆಸ್ಕಾಂ, ಸಿಂಧನೂರು |
| 2 | ಶ್ರೀಮತಿ ಪ್ರತಿಭಾ ಹಿರೇಮನಿ | ಸಕಾನಿಅ(ವಿ)(ಕ) | ಕಾ&ಪಾ ವಿಭಾಗ, ಜೆಸ್ಕಾಂ, ಸಿಂಧನೂರು |
| 3 | ಶ್ರೀ.ಮಲ್ಲಿಕಾರ್ಜುನ.ಕೆ | ಸಕಾನಿಅ(ವಿ) | ಕಾ&ಪಾ ಉಪ ವಿಭಾಗ, ಜೆಸ್ಕಾಂ, ಸಿಂಧನೂರು |
| 4 | ಶ್ರೀಮತಿ ಬೇಬಿ.ಕೆ | ಪ್ರಭಾರಿ ಲೆಕ್ಕಾಧಿಕಾರಿ | ಕಾ&ಪಾ ವಿಭಾಗ, ಜೆಸ್ಕಾಂ, ಸಿಂಧನೂರು |
| 5 | ಶ್ರೀ.ಶರಣಬಸಪ್ಪ, ಬಿ.ಎಮ್ | ಕಿರಿಯ ಅಭಿಯಂತರರು(ವಿ) | ಕಾ&ಪಾ ವಿಭಾಗ, ಜೆಸ್ಕಾಂ, ಸಿಂಧನೂರು |

ಸಭೆಯಲ್ಲಿ ಹಾಜರಿದ್ದ ಹೆಚ್.ಟಿ ಗ್ರಾಹಕರು

| ಕ್ರ.ಸಂ | ಹೆಚ್.ಟಿ.ಗ್ರಾಹಕರ ಹೆಸರು | ಹೆಚ್.ಟಿ ಸ್ಥಾವರಗಳ ಸಂಖ್ಯೆ |
|---|---|---|
| 1 | ಶ್ರೀ ಶ್ರೀನಿವಾಸ ರೈಸ್ ಮಿಲ್ ಸಿಂಧನೂರು | ಹೆಚ್.ಟಿ.ಎಸ್-100 |
| 2 | ಲಕ್ಷ್ಮೀ ಲಕ್ಷ್ಮೀನಾರಾಯಣ ಮಿನಿ ರೈಸ್ ಮಿಲ್ ಸಿಂಧನೂರು | ಹೆಚ್.ಟಿ.ಎಸ್-53 |
| 3 | ಗೌತಮ ಇಂಡಸ್ಟ್ರೀಸ್ ಸಿಂಧನೂರು | ಹೆಚ್.ಟಿ.ಎಸ್-08 |

ಸಂವಹನ ಸಭೆಗೆ ಎಲ್ಲಾ ಹೆಚ್.ಟಿ ಗ್ರಾಹಕರನ್ನು ಸಭೆಗೆ ಸ್ವಾಗತಿಸಲಾಯಿತು ಹಾಗೂ ಸದರಿ ಸಭೆಯಲ್ಲಿ ಹೆಚ್.ಟಿ ಗ್ರಾಹಕರೊಂದಿಗೆ ಜೆಸ್ಕಾಂನಿಂದ ವಿದ್ಯುತ್ ಸೇವೆಯ ಬಗ್ಗೆ ಹೆಚ್.ಟಿ ಜಕಾತಿಯ ಬಗ್ಗೆ ಹಾಗೂ T.O.D (ಸಮಯಾದರಿತ ಬೇಡಿಕೆ) ಜಕಾತಿ ಬಗ್ಗೆ ವಿಶೇಷ ಪ್ರೋತ್ಸಹ ಯೋಜನೆ (Special Incentive Scheme) ಬಗ್ಗೆ ಹಾಗು ಬಹು ಮುಖ್ಯವಾಗಿ (ರಿಯಾಯಿತಿ ವಿದ್ಯುತ್) Discounted Energy Rate Scheme ಮಾಹಿತಿಯನ್ನು ನೀಡಲಾಯಿತು.

ಸದರಿ ಸಭೆಗೆ ಹಾಜರಿದ್ದ ಮೆ॥ ಶ್ರೀನಿವಾಸ ರೈಸ್ ಮಿಲ್ ಸಿಂಧನೂರು ಹಾಗೂ ಮೆ॥ ಲಕ್ಷ್ಮೀ ನಾರಾಯಣ ಮನಿ ರೈಸ್ ಮಿಲ್ ಅವರು ಮಾತನಾಡಿ ಅವರ ರೈಸ್‌ಮಿಲ್‌ಗಳಿಗೆ ಬೆಳಿಗ್ಗೆ 6:00 ರಿಂದ 10.00 ಗಂಟೆ ಹಾಗೂ ಸಾಯಂಕಾಲ 6:.00 ಗಂಟೆಯು ರಾತ್ರಿ 9:00 ಗಂಟೆ ಸಮಯದಲ್ಲಿ ವೋಲ್ಟೇಜ್ ಸಮಸ್ಯೆಯ ಬಗ್ಗೆ ತಿಳಿಸಿದರು. ಸದರಿ ವಿಷಯವಾಗಿ ವಿದ್ಯುತ್ ಉಪಕೇಂದ್ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಮಾತನಾಡಿ ಸಮಸ್ಯೆಯನ್ನು ನಿವಾರಣೆಯನ್ನು ಮಾಡಲಾಗುವುದು ಎಂದು ತಿಳಿಸಲಾಯಿತು.

ಮುಂದುವರದು ಲೆಕ್ಕಾಧಿಕಾರಿ ಕಾರ್ಯ ಮತ್ತು ಪಾಲನೆ ವಿಭಾಗ ಜೆಸ್ಕಾಂ, ಸಿಂಧನೂರು ರವರು ಎಲ್ಲಾ ಹೆಚ್.ಟಿ ಗ್ರಾಹಕರಿಗೆ ಪ್ರಸ್ತುತ ಜಕಾತಿ-2023 ರಲ್ಲಿ ತಿಳಿಸಿರುವ ಬಹು ಮುಖ್ಯವಾಗಿ Discounted Energy Rate Scheme (DERS) ಮಾಹಿತಿಯನ್ನು ನೀಡಲಾಯಿತು ಹಾಗೂ ಸದರಿ Discounted Energy Rate Scheme ಎಲ್.ಟಿ-3 ಹಾಗೂ ಎಲ್.ಟಿ-5 ಗ್ರಾಹಕರಿಗೂ ವಿಸ್ತರಣೆ ಮಾಡಿ ಕರ್ನಾಟಕ ವಿದ್ಯುತ್‌ಚ್ಛಕ್ತಿ ನಿಯಂತ್ರಣ ಆಯೋಗ ಆದೇಶಿಸಿರುವ ಬಗ್ಗೆ ಮಾಹಿತಿಯನ್ನು ಸಹ ನೀಡಲಾಗಿಯತ್ತು.

Asst. Coml 10-10-23

2/21/24, 5:13 PM

ಸಭೆಗೆ ಹಾಜರಿದ್ದ ಎಲ್ಲಾ ಹೆಚ್.ಟಿ ಗ್ರಾಹಕರು Discounted Energy Rate Scheme ಯೋಜನೆಗೆ ಅರ್ಜಿಯನ್ನು ಸಲ್ಲಿಸುತ್ತವೆಂದು ಧನಾತ್ಮಕ ಪ್ರತಿಕ್ರಿಯೆಯನ್ನು ನೀಡಿದರು. ಕೊನೆಯದಾಗಿ ಸಭೆಗೆ ಹಾಜರಿದ್ದ ಎಲ್ಲಾ ಹೆಚ್.ಟಿ ಗ್ರಾಹಕರು/ ಅಧಿಕಾರಿಗಳಿಗೆ ಧನ್ಯವಾದಗಳು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ವಿಭಾಗ,
ಜೆಸ್ಕಾಂ, ಸಿಂಧನೂರು.

ಪ್ರತಿಗಳು ದಯಾಪರ ಮಾಹಿತಿಗಾಗಿ:

1) ಮಾನ್ಯ ಮುಖ್ಯ ಅಭಿಯಂತರರು(ವಿ), ಕಾರ್ಯಾಚರಣೆ, ನಿಗಮ ಕಛೇರಿ, ಜೆಸ್ಕಾಂ, ~~ಬಳ್ಳಾರಿ~~ ಕಲಬುರಗಿ
2) ಮಾನ್ಯ ಮುಖ್ಯ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಲಯ ಕಛೇರಿ, ಜೆಸ್ಕಾಂ, ಬಳ್ಳಾರಿ
3) ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ ಕಛೇರಿ, ಜೆಸ್ಕಾಂ, ರಾಯಚೂರು.

ಪ್ರತಿಗಳು ಮಾಹಿತಿಗಾಗಿ:

4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಜೆಸ್ಕಾಂ, ಸಿಂಧನೂರು./ಲಿಂಗಸ್ಗೂರು/ಮಸ್ಕಿ
5) ಲೆಅ/ಸಲೆಅ/ಕ.ಕ